# ಮೈಸೂರು ವಿಧಾನ ಸಭೆ

# MYSORE LEGISLATIVE ASSEMBLY

*Saturday, 21st March 1970*

The House met in the Assembly Chamber, Vidhana Soudha, Bangalore, at Thirty Minutes past Eight of the Clock.

MR. DEPUTY SPEAKER (SRI D. MANJUNATH) in the Chair.

---

## STARRED QUESTIONS
### (to which oral answers were given)

### Building for Government Hospital at Coondapur

471. Smt. WINNIFRED F. FERNANDES (Coondapur).—

Will the Minister for Public Works be pleased to state :—

(*a*) whether the Government is aware that the building of the Magistrate's Court at Coondapur vacated about 4 years back for extending the Government Hospital at Coondapur is lying idle as the work of the building is incomplete ;

(*b*) whether they would issue directions to the concerned officials to expedite the work and see that the building vacated years back is put to use early ?

Sri BASAVARAJ MAGAVI (Deputy Minister for Public Works).—

(*a*) No, the building is in occupation by the Hospital authorities.

(*b*) Does not arise in view of reply to clause (*a*).

Smt. WINNIFRED F. FERNANDES.—With reference to answer (a) may I know from when it is under occupation by the said Hospital authorities ?

Sri BASAVARAJ MAGAVI.—This court building was taken possession of by the PWD on 19th November 1965 and in 1966 the same was handed over to the Medical Department. Afterwards, the latter wanted some alterations and additions to be made for the present building. All these works were completed in the year 1969 and it has become a full-fledged 29 bed hospital from October 1969.

Smt. WINNIFRED F. FERNANDES.—This is far from truth, Sir. May I ask through the Speaker when it was occupied ? Till last month it was not occupied at all. May I know the correct date. Will the Hon. Minister please enquire and let me know ?

Sri BASAVARAJ MAGAVI.—According to information available before me, the building is under occupation from October 1969. If the hon. Member still insists that I should verify, I have no objection to verify.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಆಸ್ಪತ್ರೆಗೆ ಯಾರಾದರೂ ಮಂತ್ರಿಗಳು ಭೇಟಿ ಕೊಟ್ಟಿದ್ದರೇ ?

ಶ್ರೀ ಬಸವರಾಜ ಮಾಗಾವಿ.—ನಾನಂತೂ ಭೇಟಿ ಕೊಟ್ಟಿಲ್ಲ, ಬಹುಶಃ ಆರೋಗ್ಯ ಸಚಿವರು, ಉಪಸಚಿವರು ಭೇಟಿ ಕೊಟ್ಟಿರಬಹುದು.

Smt. WINNIFRED F. FERNANDES.—May I know when the said work was entrusted by the Hospital authorities ?

Sri BASAVARAJ MAGAVI.—I have already answered all these questions. It was in 1967 July, that the Health Department asked for additions and alterations and an estimate was prepared to the tune of Rs. 9,000 and that has been carried out. And now probably the hon. Member is mentioning this because the electrical fittings are still to be made. An additional demand was sent by the Health Department for electrical installations and that is still pending sanction. The other things are completed.

ಶ್ರೀ ಬಿ. ಎಂ. ಇದಿನಬ್ಬ.—ಕುಂದಾಪುರದಲ್ಲಿ ದಿನ ಹೋದ ಹಾಗೆ ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಈ ಆಸ್ಪತ್ರೆಯ ಹೆಚ್ಚು ವಿಸ್ತರಣೆಯ ಅಗತ್ಯವಿದೆಯಲ್ಲವೆ ?

ಶ್ರೀ ಬಸವರಾಜ ಮಾಗಾವಿ. ಅದರ ಅಗತ್ಯ ಅಷ್ಟಾಗಿ ಕಂಡುಬಂದಿಲ್ಲ. ಈಗ ಎಲೆಕ್ಟ್ರಿಫಿಕೇಷನ್ ಕೆಲಸ ಇನ್ನೂ ಆಗಿಲ್ಲ, ಅದಾಗಬೇಕಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಹೇಳುವುದಕ್ಕೂ ಮಾನ್ಯ ಮಂತ್ರಿಗಳು ಹೇಳುವುದಕ್ಕೂ ವ್ಯತ್ಯಾಸವಿದೆ. ಮಂತ್ರಿಗಳಿಗೆ ಅಧಿಕಾರಿಗಳು ಒದಗಿಸಿರುವಂಥ ಸಮಾಚಾರ ಸರಿಯಲ್ಲದಿದ್ದರೆ ಅಂಥವರ ಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಶಿಕ್ಷೆ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ನಾನು ಈ ಬಗ್ಗೆ ಯಾವತ್ತಿಗೂ ಬಹಳ ನಿಗಾ ವಹಿಸುತ್ತೇನೆ. ಯಾವುದಾದರೂ ಪ್ರಸಂಗದಲ್ಲಿ ಅಧಿಕಾರಿಗಳು ಸಂಪೂರ್ಣವಾದ ವಿವರಣೆಯನ್ನು ಒದಗಿಸಿಲ್ಲ ಅಥವಾ ತಪ್ಪು ಸಮಾಚಾರ ಒದಗಿಸುತ್ತಾರೆ ಎಂದು ಕಂಡು ಬಂದಾಗ ಆ ಫೈಲ್ ಮೇಲೆಯೇ ರಿಮಾರ್ಕ್ ಬರೆಯುತ್ತೇನೆ. ಈಗಿನ ನಿದರ್ಶನದಲ್ಲಿ ಎನ್‌ಕ್ವೈರಿ ಮಾಡಿ, ಅಧಿಕಾರಿಗಳು ತಪ್ಪು ಮಾಡಿದ್ದರೆ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಕಟ್ಟಡವನ್ನು ಇಲಾಖೆಯ ವಶಕ್ಕೆ ಕೊಟ್ಟಾಗ ಅದನ್ನು ಪೂರ್ತಿಯಾಗಿ ಆಕ್ಯುಪೈ ಮಾಡಿದ್ದೇವೆಂದು ಪತ್ರ ಮುಖೇನ ತಿಳಿಸಿದ್ದರೆ ಅದು ಆಕ್ಯುಪೇಷನ್ ಹೌದೋ ಅಲ್ಲವೋ, ಅಥವಾ ಖುದ್ದಾಗಿ ನೋಡಿ ಆಕ್ಯುಪೈ ಮಾಡಿದ್ದಾರೆ ಅಥವಾ ಇಲ್ಲ ಎಂದು ಹೇಳಬೇಕೆ ?

ಶ್ರೀ ಬಸವರಾಜ ಮಾಗಾವಿ.—1966ರಲ್ಲಿ ಆ ಕಟ್ಟಡವನ್ನು ಕೋರ್ಟಿನವರಿಂದ ನಮ್ಮ ಕಬ್ಜಕ್ಕೆ ತೆಗೆದುಕೊಂಡು ಆರೋಗ್ಯ ಇಲಾಖೆಗೆ ಕೊಟ್ಟಿದ್ದೇವೆ. ಕೆಲವು ಬದಲಾವಣೆಗಳನ್ನು ಮಾಡಬೇಕಾಗಿತ್ತು. ಆರೋಗ್ಯ ಇಲಾಖೆಯವರು ನಮಗೆ ಹಣವನ್ನು ಒದಗಿಸಬೇಕಾಗಿತ್ತು. ಇದರಿಂದ ಸ್ವಲ್ಪ ವಿಳಂಬವಾಗಿರಬಹುದು.

Smt. WINNIFRED F. FERNANDES.—Just now the Hon. Deputy Minister stated that it was not electrified. Is it possible to house the patients in an unelectrified hospital ?

Sri BASVARAJ MAGAVI.—It happens in a transitionary period. All of them cannot be provided accommodation there. It is a matter of few weeks for completion of electrical equipments.